ದಿನಾಂಕಃ 21-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಆರ್ ಬಿ ವಕೀಲರಿಂದ

ನನಗೆ ದಾವಾ ಅಸ್ತಿಯನ್ನು ಚಂದ್ರಮ್ಮನವರು ಮಾರಾಟ ಮಾಡಿರುತ್ತಾರೆ. ದಿಃ17-05-2001 ರಲ್ಲಿ ಮರಾಟ ಮಾಡಿರುತ್ತಾರೆ. ಆ ವರ್ಷ ಚಂದ್ರಮ್ಮನವರಿಗೆ ಪಂಚಾಯ್ತಿ ಖಾತೆ ಇತ್ತಾ ಎಂದರೆ ಇತ್ತು. ಚಂದ್ರಮ್ಮ ಮಾರಾಟ ಮಾಡುವಾಗ ಅವರಿಗೆ ಯಾವುದೇ ಪಂಚಾಯ್ತಿ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಚಂದ್ರಮ್ಮನವರಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದರೆ ಪಂಚಾಯ್ತಿ ಯಿಂದ ಬಂದಿರುತ್ತದೆ. ಪಂಚಾಯ್ತಿಯಿಂದ ಮಂಜೂರಾದ ದಾಖಲೆಗಳನ್ನು ನೋಡಿರುತ್ತೀರಾ ಎಂದರೆ ಮೊದಲು ಕೋಟಗಲ್ ಪಂಚಾಯ್ತಿಯಲ್ಲಿ ದಾಖಲೆ ಇದ್ದು ನಂತರ ಕಾಗತಿ ಗ್ರಾಮ ಪಂಚಾಯ್ತಿಗೆ ಬದಲಾವಣೆಯಾಗಿರುತ್ತದೆ. ಚಂದ್ರಮ್ಮನವರಿಗೆ ಮಂಜೂರಾದ ದಾಖಲೆ ಹೌಸ್ ಲೀಸ್ಟ್. ಆಸ್ತಿಯನ್ನು ಖರೀದಿ ಮಾಡುವಾಗ ಚಂದ್ರಮ್ಮನಿಗೆ ಅಸ್ತಿ ಹೇಗೆ ಬಂತು ಅಂತ ಕೇಳಿ ಮಾಡಿಕೊಂಡಿರುತ್ತೇನೆ.

ನಿಮ್ಮ ಕ್ರಯ ಪತ್ರದಲ್ಲಿ ಚಂದ್ರಮ್ಮನಿಗೆ ಮಂಜೂರಾಗಿದ್ದು ಅಂತ ಬರೆಸಿರುತ್ತೀರಾ ಎಂದರೆ ನನಗೆ ಓದಲು ಅಷ್ಟಾಗಿ ಬರದ ಕಾರಣ ಏನು ಬರೆದಿರುತ್ತಾರೆ ಅಂತ ಗೊತ್ತಿರುವುದಿಲ್ಲ. ದಾವಾ ಆಸ್ತಿ ಮೊದಲು ಮುನಿವೆಂಕಟಪ್ಪನವರಿಗೆ ಸೇರಿತ್ತಾ ಎಂದರೆ ಮುನಿವೆಂಕಟಪ್ಪ ಪಕ್ಕದಲ್ಲಿ ಇರುತ್ತಾರೆ. ಈ ಆಸ್ತಿ ಸೇರಿರುವುದಿಲ್ಲ. ಇದೇ ದಾವಾ ಆಸ್ತಿ ಮೇಲೆ ಚಿಂತಾಮಣಿ ಇ ಒ ರವರ ನಡುವೆ ದಾವೆ ನಡೆದಿತ್ತು ಎಂದರೆ ನಡೆದಿತ್ತು. ಅದರ ಅಪೀಲು ನಂ. 7/2016-17 ಎಂದರೆ ಸರಿ. ಅದನ್ನು ನೀವು ಶ್ರೀನಿವಾಸ್ ಎಂಬುವವರ ಮೇಲೆ ಹಾಕಿರುತ್ತೀರಿ ಎಂದರೆ ಸರಿ. ನೀವು ಆ ಅರ್ಜಿಯನ್ನು ಹಾಕಿದ್ದು ಈ ದಾವೆಯಲ್ಲಿ ಇರುವ ಆಸ್ತಿ ಮೇಲೆ ಎಂದರೆ ಸರಿ. ದಿಃ22-10-2018 ರಲ್ಲಿ ಆ ಆಸ್ತಿಗೆ ಸಂಬಂಧಿಸಿದಂತೆ ಇ ಒ ರವರು ನಿಮಗೂ ಆಸ್ತಿಗೂ ಸಂಬಂಧ ಇಲ್ಲ ಎಂದು ಆದೇಶ ಮಾಡಿರುತ್ತಾರೆ ಎಂದರೆ ಆದೇಶ ಆಗಿರುತ್ತದೆ ಸಾಕ್ಷಿ ಮುಂದುವರಿದು ನನ್ನ ಪರವಾಗಿ ಆದೇಶ ಮಾಡಿರುತ್ತಾರೆ. ಆ ಆದೇಶದಲ್ಲಿ ನಿಮಗೂ ಆಸ್ತಿಗೂ ಯಾವುದೇ ಸಂಬಂಧ

ಇಲ್ಲ ಅಂತ ಆದೇಶ ಆಗಿರುತ್ತದೆ ಎಂದರೆ ಸುಳ್ಳು ನನ್ನ ಪಂಚಾಯ್ತಿ ಖಾತೆ ನಂ. 69. ಖಾತೆ ನಂ. 69 ಎಂಬುದು ನಿಮಗೆ ಸೇರಿರುವುದಿಲ್ಲ ಶೋಬನ್ ಬಾಬು ರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಈಗ ಪಂಚಾಯ್ತಿಯಲ್ಲಿ ನಿಮ್ಮ ಹೆಸರಿಗೆ ಖಾತೆ ಇದೆಯಾ ಎಂದರೆ ಅದು ನನಗೆ ಗೊತ್ತಿರುವುದಿಲ್ಲ, ನಾನು ದಾಖಲೆ ತೆಗೆದುಕೊಂಡಾಗ ಇತ್ತು. ಎಷ್ಟು ದಿನಗಳ ಹಿಂದೆ ದಾಖಲೆ ತೆಗೆದುಕೊಂಡಿರುತ್ತೀರಿ ಎಂದರೆ 2021 ರಲಿ. 2021 ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. ನೀವು ಕೊಟ್ಟಿರುವ ದಾಖಲೆ 2001-02 ಮತ್ತು 2003 ದಾಖಲೆ ಎಂದರೆ ಸರಿ. ನೀವು ದಾವೆ ಸಲ್ಲಿಸಿರುವುದು 2021 ರಲ್ಲಿ ಎಂದರೆ ಸರಿ. 2021 ರಲ್ಲಿ ಖಾತೆ ಸರ್ಟಿಫಿಕೇಟ್ ಅನ್ನು ತೆಗೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಇಲ್ಲ ತೊಂದರೆ ಮಾಡಿದ್ದರಿಂದ ದಾವೆ ಹಾಕಿರುತ್ತೇನೆ. ನಿಮ್ಮ ಹೆಸರಿನಲ್ಲಿ ಯಾವುದೇ ಖಾತೆ ಇರುವುದಿಲ್ಲ ಆದ್ದರಿಂದ ನೀವು ಹೊಸ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸುಳ್ಳು ನಿಪಿ.1 ಮತ್ತು 2 ಅನ್ನು ಸೃಷ್ಟಿಮಾಡಿಕೊಂಡು ನ್ಯಾಯಾಲಯಕ್ಕೆ ನೀಡಿದ್ದು ಪಂಚಾಯ್ತಿ ದಾಖಲೆಯಲ್ಲಿ ಇಲ್ಲ ಎಂದರೆ ಸುಳ್ಳು

ನಿಮ್ಮ ಆಸ್ತಿಯ ಉತ್ತರಕ್ಕೆ ಕಾಲುವೆ ಇದೆ ಎಂದರೆ ಈಗ ಮಾಡಿದ್ದು ನಾನು ತೆಗೆದುಕೊಳ್ಳುವಾಗ ಇರುವುದಿಲ್ಲ. ಪೂರ್ವಕ್ಕೆ ಕಾಲುವೆ ಇದೆ ಎಂದರೆ ಈಗ ಒಂದೂವರೆ ವರ್ಷದ ಹಿಂದೆ ಮಾಡಿರುತ್ತಾರೆ. ತುಂಬಾ ವರ್ಷಗಳಿಂದ ಉತ್ತರಕ್ಕೆ ಮತ್ತು ಪೂರ್ವಕ್ಕೆ ಕಾಲುವೆ ಇರುವುದು ಎಂದರೆ ಸುಳ್ಳು ಪೂರ್ವ ಪಶ್ಚಿಮ 30, ಉತ್ತರ ದಕ್ಷಿಣ 45 ಅಡಿ ಇದೆ. ಪೂರ್ವದಲ್ಲಿಕಾಲುವೆ ಪಶ್ಚಿಮದಲ್ಲಿ ಚಿಂತಾವಣಿ ಸಿಂಗಸಂದ್ರಕ್ಕೆ ಹೋಗುವ ರಸ್ತೆ ಎಂದರೆ ಸರಿ. ಕಾಲುವೆಯಿಂದ ರಸ್ತೆ ವರೆಗೆ ಜಾಗ ಇರುವುದು 25 ಅಡಿ ಎಂದರೆ ಸರಿಯಲ್ಲ 30 ಅಡಿ. ಉತ್ತರರಕ್ಕೆ ಕಾಲು ಇದ್ದು ದಕ್ಷಿಣಕ್ಕೆ ಶ್ರೀನಿವಾಸ್ ರೆಡ್ಡಿ ಎಂದರೆ ಸರಿ. ಶ್ರೀನಿವಾಸ್ ರೆಡ್ಡಿ ರವರು ಮನೆ ಕಟ್ಟಿರುತ್ತಾರೆ ಎಂದರೆ ಇಲ್ಲ. ಶ್ರೀನಿವಾಸ್ ರೆಡ್ಡಿ ಆಸ್ತಿಯಿಂದ ಉತ್ತರಕ್ಕೆ ಕಾಲುವೆ ಇದ್ದು ಅದು 22 ಅಡಿ ಮಾತ್ರ ಎಂದರೆ ಸರಿಯಲ್ಲ 45 ಅಡಿ ಇದ್ದು ಸ್ಥಳೀಕರು ಹೇಳಿದ ಮೇರೆಗೆ ನಾವು ಕಾಲುವಗೆ ಜಾಗ ಬಿಟ್ಟಿರುತ್ತೇವೆ. ದಕ್ಷಿಣಕ್ಕೆ ವೆಂಕಟರಾಮರೆಡ್ಡಿ ರವರ ಮನೆ ಇದೆ. ಆ ಮನೆಯಿಂದ ಉತ್ತರದ ಕಡೆ ಕಾಲುವೆಗೆ ಎಷ್ಟು ಅಡಿ ಇದೆ ಎಂದರೆ ಈಗ ಅಳತೆ ಮಾಡಿರುವುದಿಲ್ಲ.

ಪ್ರತಿವಾದಿಯರು ಹಾಕಿರುವ ತಕರಾರನ್ನು ತಿಳಿದುಕೊಂಡಿರುತ್ತೇನೆ. ವೆಂಕಟರಾಮರೆಡ್ಡಿ ರವರ ಮನೆಯಿಂದ ಕಾಲುಗೆ 22 ಅಡಿ ಇದೆ ಎಂದು ಹಾಕಿರುತ್ತಾರೆ ಎಂದರೆ ಹಾಕಿರುತ್ತಾರೆ ಆದರೆ ಅದು ಸುಳ್ಳು ತಕರಾರು ಹಾಕಿದ ನಂತರ ಅಳತೆ ಎಷ್ಟು ಇದೆ ಅಂತ ಅಳತೆ ಮಾಡಿಸಿರುತ್ತೀರಾ ಎಂದರೆ ಇಲ್ಲ ಅಳತೆ ಮಾಡಲು ಹೋದರೆ ಗಲಾಟೆ ಮಾಡುತ್ತಾರೆ. ನ್ಯಾಯಾಲಯದಿಂದ ಅಳತೆ ಮಾಡಿಸಬಹುದಾ ಎಂದರೆ ಮಾಡಿಸಬಹುದು. ನೀವು ದಾವೆಯಲ್ಲಿ ಹೇಳಿರುವ ವಿಸ್ತೀರ್ಣ ಆ ಜಾದಗಲ್ಲಿ ಇರುವುದಿಲ್ಲ ಎಂದರೆ ಸುಳ್ಳು ದಾವಾ ಸ್ವತ್ತು ಮೊದಲು ಶ್ರೀನಿವಾಸ್ ಎಂಬುವವರಿಗೆ ಸೇರಿತ್ತು ಅದನ್ನು ಈಗ ಪ್ರತಿವಾದಿ ಶ್ರೀರಾಮಪ್ಪ ದಿಃ15-05-2017 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು ಸುಳ್ಳು ದಾಖಲೆ ಮಾಡಿಕೊಂಡಿರುತ್ತಾರೆ. ಪಂಚಾಯ್ತಿಯಲ್ಲಿ ಕೂಡ ಅವರ ದಾಖಲೆ ಇರುವುದು ಎಂದರೆ ರಾಜಕೀಯ ಪ್ರಭಾವ ಮಾಡಿ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತಾರೆ.

ಚಂದ್ರಮ್ಮ ಯಾವ ಊರಿನವರು ಎಂದರೆ ಚಿಂತಾಮಣಿಯವರು. ಕೆಲವು ಕಾಲ ನಮ್ಮ ಊರಿನಲ್ಲಿ ಉಳಿದುಕೊಂಡಿದ್ದು. ನೀವು ಕೊಂಡು ಕೊಂಡಾಗ ಚಿಂತಾಮಣಿಯಲ್ಲಿ ಇದ್ದರು ಎಂದರೆ ಊರಿನಲ್ಲಿ ಇದ್ದು ಮಾರಾಟ ಮಾಡಿರುತ್ತಾರೆ. ನಿಮ್ಮ ಪತ್ರದಲ್ಲಿ ಚಿಂತಾಮಣಿ ವಿಳಾಸ ತೋರಿಸಿರುತ್ತೀರಿ ಎಂದರೆ ಹೌದು ಆ ವ್ಯಕ್ತಿಗಳಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಬೇನಾಮಿ ವ್ಯಕ್ತಿಗಳಿಂದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸುಳ್ಳು ದಾವಾ ಸ್ವತ್ತಿನ ಹಕ್ಕು ಸ್ವಾಧೀನ ನಿಮಗೆ ಇಲ್ಲ ಎಂದರೆ ಸುಳ್ಳು

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.